# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ದಿನಾಂಕ: 03-03-2018

## ಪತ್ರಿಕಾ ಪ್ರಕಟಣೆಗಾಗಿ

ವಿಜಯಪುರ: ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸುವ ಯಂತ್ರಗಳು ಡಿಜಿಟಲ್ ಮಾಧ್ಯಮದ ಅಂಗಗಳಾಗಿವೆ ಮತ್ತು ಅವು ನಮ್ಮ ದಿನನಿತ್ಯದ ಸಂವಹನ ಕ್ರಿಯೆಯಲ್ಲಿ ಬಳಕೆಯಾಗುತ್ತಿವೆ ಎಂದು ಬೆಂಗಳೂರಿನ 'ದಿ ಸ್ಟೇಟ್' ಡಿಜಿಟಲ್ ಮಾಧ್ಯಮದ ಮುಖ್ಯ ಉಪ ಸಂಪಾದಕ ಸಹ್ಯಾದ್ರಿ ನಾಗರಾಜ್ ಅಭಿಪ್ರಾಯಪಟ್ಟರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಾಧ್ಯಮ ಮನೆ ಚಟುವಟಿಕೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ 'ಡಿಜಿಟಲ್ ಮಾಧ್ಯಮದ ಸವಾಲುಗಳು ಮತ್ತು ಅವಕಾಶಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಿಜಿಟಲ್ ಮಾಧ್ಯಮ ಪೂರ್ತಿ ಸುದ್ದಿಯನ್ನು ಹೇಳುವುದಿಲ್ಲ. ಒಂದು ಸುದ್ದಿಯ ಹಿನ್ನೆಲೆ ಮುನ್ನೆಲೆಯನ್ನು ಅರ್ಥೈಸಿಕೊಂಡು ಅದರ ವಿಶ್ಲೇಷಣೆಯನ್ನು ತಿಳಿಸುತ್ತದೆ ಎಂದು ತಿಳಿಸಿದರು.

ಇಂದು ಡಿಜಿಟಲ್ ಮಾಧ್ಯಮವೇ ಅನೇಕ ಸವಾಲುಗಳನ್ನು ಎದುರಿಸುತ್ತದೆ. ಯಾವ ರೀತಿಯ ಜನರು ಈ ಮಾಧ್ಯಮವನ್ನು ಬಳಸುತ್ತಾರೆ, ಮಾಹಿತಿಯನ್ನು ಹೇಗೆ ಜನರಿಗೆ ತಲುಪಿಸಬೇಕು ಎಂಬ ಸಮಸ್ಯೆಗಳು ಅವರಿಗೆ ಎದುರಾಗುತ್ತವೆ ಎಂದು ಅವರು ಹೇಳಿದರು.

ಬರುವ ದಿನಗಳಲ್ಲಿ ಹೆಚ್ಚಿನ ಇಂಟರನೆಟ್ ಬಳಕೆಯಿಂದಾಗಿ ಮುದ್ರಣ ಮಾಧ್ಯಮದ ಮಹತ್ವ ಕಡಿಮೆಯಾಗಬಹುದು. ಆದ್ದರಿಂದ ವಿದ್ಯಾರ್ಥಿನಿಯರು ತಂತ್ರಜ್ಞಾನವನ್ನು ಬಳಸಿ ಕ್ರಿಯಾಶೀಲತೆಯಿಂದ ಕೆಲಸ ಮಾಡಬೇಕು ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಯಾವುದೇ ಸುದ್ದಿಯನ್ನು ಮಾಡಬೇಕಾದರೆ ಭಾಷಾ ಸಂಪತ್ತು ಅತೀ ಮುಖ್ಯ. ಆದ್ದರಿಂದ ಡಿಜಿಟಲ್ ಮಾಧ್ಯಮದಲ್ಲಿ ಯಾವುದೇ ರೀತಿಯ ತಪ್ಪುಗಳಾಗದಂತೆ ಒಂದು ಸುದ್ದಿಯನ್ನು ಬೇರೆ ಬೇರೆ ದೃಷ್ಟಿಕೋನದಿಂದ ಗ್ರಹಿಸಿ ಜನರಿಗೆ ಮಾಹಿತಿ ತಲುಪಿಸಬೇಕು ಎಂದು ತಿಳಿಸಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿ ಸುನಿತಾ ಚಿಕ್ಕಮಠ ನಿರೂಪಿಸಿದರು. ಲಕ್ಷ್ಮೀ ಮೊರಬ ಸ್ವಾಗತಿಸಿದರು. ಜ್ಯೋತಿ ಪುರದ ಪರಿಚಯಿಸಿದರು. ಕೆಂಚಮ್ಮಾ ಮೊಟೆಬೆನ್ನೂರ ವಂದಿಸಿದರು.

**ಫೋಟೊ ಕ್ಯಾಪ್ಷನ್ :**

1. ಅಕ್ಕಮಹಾದೇವಿ ಮಹಿಳಾ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಾಧ್ಯಮ ಮನೆ ಚಟುವಟಿಕೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ 'ಡಿಜಿಟಲ್ ಮಾಧ್ಯಮದ ಸವಾಲುಗಳು ಮತ್ತು ಅವಕಾಶಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬೆಂಗಳೂರಿನ 'ದಿ ಸ್ಟೇಟ್' ಡಿಜಿಟಲ್ ಮಾಧ್ಯಮದ ಮುಖ್ಯ ಉಪ ಸಂಪಾದಕ ಸಹ್ಯಾದ್ರಿ ನಾಗರಾಜ್ ಮಾತನಾಡಿದರು.

